# ಏಕರೂಪ ಶಿಕ್ಷಣ ನೀತಿ ಹೆಸರಿನಲ್ಲಿ ಎನ್‌ಇಪಿ ಹೇರಿಕೆ ಅವೈಜ್ಞಾನಿಕ: ಪ್ರೊ.ಸಬಿತಾ ಬನ್ನಾಡಿ

ಬೆಂಗಳೂರು, ಜ.10: ಭಾರತದಲ್ಲಿನ ವಿವಿಧತೆ ಹಾಗೂ ವೈವಿಧ್ಯತೆಯನ್ನು ಗಣನೆಗೆ ತೆಗೆದುಕೊಳ್ಳದೆ ಏಕರೂಪ ಶಿಕ್ಷಣ ನೀತಿ ಹೆಸರಿನಲ್ಲಿ ಎನ್ ಇಪಿ-2020 ಹೇರಿಕೆ ಅತ್ಯಂತ ಅವೈಜ್ಞಾನಿಕ ಹಾಗೂ ಅಪ್ರಜಾತಾಂತ್ರಿಕವಾಗಿದೆ ಎಂದು ಸಾಹಿತಿ ಪ್ರೊ. ಸಬಿತಾ ಬನ್ನಾಡಿ ಟೀಕಿಸಿದ್ದಾರೆ.

ಬುಧವಾರ ನಗರದ ಗಾಂಧಿ ಭವನದಲ್ಲಿ ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ನೇತೃತ್ವದಲ್ಲಿ ರಾಜ್ಯ ಮಟ್ಟದ ಶೈಕ್ಷಣಿಕ ಸಮಾವೇಶದಲ್ಲಿ ಮಾತನಾಡಿದ ಅವರು, ಕರ್ನಾಟಕದಲ್ಲಂತೂ ಈ ನೀತಿಯನ್ನು ತಲೆಕೆಳಗಾಗಿ ಅಂದರೆ ಶಾಲಾ ಶಿಕ್ಷಣವನ್ನು ಬಿಟ್ಟು ಪದವಿ ಶಿಕ್ಷಣದಲ್ಲಿ ಜಾರಿಗೊಳಿಸಲಾಗಿರುವುದು ಅತ್ಯಂತ ಖೇದದ ಸಂಗತಿ ಎಂದರು.

ಎನ್‌ಇಪಿ ಜಾರಿಯಿಂದಾಗಿ ವಿದ್ಯಾರ್ಥಿಗಳಲ್ಲಿ ಮಾನಸಿಕ ಒತ್ತಡವನ್ನು ಉಂಟು ಮಾಡುತ್ತಿದೆಯಲ್ಲದೇ ಅವರ ಭವಿಷ್ಯವನ್ನು ಹಾಳು ಮಾಡುತ್ತಿದೆ. ರಚನೆ ಮಾಡಿರುವ ಪಠ್ಯಕ್ರಮವು ನಮ್ಮನ್ನು 20 ವರ್ಷಗಳ ಹಿಂದಕ್ಕೆ ಕರೆದುಕೊಂಡು ಹೋಗಿದೆ ಎಂದು ಅವರು ಹೇಳಿದರು.

ಸೆಂಟ್ ಜೋಸೆಫ್ ವಿವಿ ಉಪಕುಲಪತಿ ಡಾ.ವಿಕ್ಟರ್ ಲೋಬೋ ಮಾತನಾಡಿ, ರಾಜ್ಯ




ಹೊಸ ಶಿಕ್ಷಣ ನೀತಿಯು ಶಿಕ್ಷಣ ಪ್ರಜಾಸತಾತ್ಮಕ, ಧರ್ಮನಿರಪೇಕ್ಷ ಹಾಗೂ ವೈಜ್ಞಾನಿಕವಾಗಿ ಇರುವಂತೆ ನೋಡಿಕೊಳ್ಳಿ. ಶಿಕ್ಷಣದ ಜವಾಬ್ದಾರಿ ಬರಿಯ ನುರಿತ ವ್ಯಕ್ತಿಗಳನ್ನು ಸೃಷ್ಟಿಸುವುದಲ್ಲ ಬದಲಾಗಿ ಕ್ರಿಯಾತ್ಮಕ ಹಾಗೂ ವಿಮರ್ಶಾತ್ಮಕ ಚಿಂತನೆ ಉಳ್ಳ ವ್ಯಕ್ತಿಗಳನ್ನು ಸೃಷ್ಟಿಸುವುದು. ಸಮಾಜವಾದಿ ಕ್ಯೂಬಾದ ಶಿಕ್ಷಣ ವ್ಯವಸ್ಥೆಯಿಂದ ನಾವು ಸ್ಪೂರ್ತಿ ಪಡೆದು ಉಚಿತ ಹಾಗೂ ಸಾರ್ವತ್ರಿಕ ಶಿಕ್ಷಣ ಖಾತ್ರಿಪಡಿಸಲು ಮುಂದಾಗಬೇಕು ಎಂದರು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪ್ರೊ. ತರುಣಕಾಂತಿ ನಸ್ಕರ್ ಮಾತನಾಡಿ, ರಾಷ್ಟ್ರೀಯ ಶಿಕ್ಷಣ ನೀತಿಯ ಆಳವಾಗಿ ಅಧ್ಯಯನ ಮಾಡಿದಾಗ ಇದು ಖಂಡಿತವಾಗಿಯೂ ರಾಷ್ಟ್ರ ವಿರೋಧಿ ಶಿಕ್ಷಣ ನೀತಿಯಾಗಿದೆ ಅನ್ನುವುದನ್ನು ಗಮನಿಸಬಹುದು. ಶಿಕ್ಷಣದ ಸಮಾನತೆ, ಸಾರ್ವತ್ರಿಕರಣ ಎಂಬ ಘೋಷಣೆಗಳನ್ನು ನೀಡಿ ಬಹುಸಂಖ್ಯಾತ ಬಡ ಹಾಗೂ ಮಧ್ಯಮ ವರ್ಗದವರಿಂದ ಶಿಕ್ಷಣವನ್ನು ಕಸಿದುಕೊಳ್ಳುವ ಹುನ್ನಾರ ಇದರಲ್ಲಿ ಅಡಗಿದೆ ಎಂದರು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ಅಲ್ಲಮಪ್ರಭು ಬೆಟ್ಟದೂರು, ಉಪಾಧ್ಯಕ್ಷ ವಿ.ಎನ್. ರಾಜಶೇಖರ್, ಕಾರ್ಯದರ್ಶಿ ಎಸ್.ಜಿ.ಮಹೇಶ್, ವಿಜ್ಞಾನಿ ಆರ್.ಎಲ್.ಮೌರ್ಯನ್, ಪ್ರೊ. ಸೋಮಶೇಖರಪ್ಪ ಸೇರಿ ಹಲವರು ಉಪಸ್ಥಿತರಿದ್ದರು. ನೂರಾರು ಸಂಖ್ಯೆಯಲ್ಲಿ ಉಪನ್ಯಾಸಕರು, ಶಿಕ್ಷಕರು, ಪೋಷಕರು ಹಾಗೂ ಪದವಿ ಕಾಲೇಜುಗಳ ವಿದ್ಯಾರ್ಥಿಗಳು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

> “ಭಾಷಾನೀತಿಯು ಹಿಂದಿ ಭಾಷೆಯನ್ನು ಒತ್ತಾಯ ಪೂರಕವಾಗಿ ದೇಶದ ಜನರ ಮೇಲೆ ಹೇರುವಂತಹ ಕುತಂತ್ರ ಇದರಲ್ಲಿ ಅಡಗಿದೆ. ಅವೈಜ್ಞಾನಿಕ, ಇತಿಹಾಸಕ್ಕೆ ವಿರುದ್ಧವಾಗಿರುವ ವಿಷಯಗಳನ್ನು ಇದರಲ್ಲಿ ತುರುಕಲಾಗಿದೆ. ಇದು ಒಂದು ಕಡೆಯಾದರೆ ಮತ್ತೊಂದೆಡೆ ನಿಯಮಿತವಾಗಿ ಶಿಕ್ಷಣದ ಬಜೆಟನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಕಡಿತಗೊಳಿಸುತ್ತಿವೆ. ಶಿಕ್ಷಣದ ಕೇಂದ್ರೀಕರಣ, ಖಾಸಗೀಕರಣ, ಕೇಸರೀಕರಣ ಹುನ್ನಾರವಿರುವ ಎನ್‌ಇಪಿ-2020ಅನ್ನು ದೇಶದಾದ್ಯಂತ ಸೋಲಿಸುವ ಅಗತ್ಯವಿದೆ.
>
> **-ಪ್ರೊ.ತರುಣಕಾಂತಿ ನಸ್ಕರ್**, ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ